JULY 04, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

- ಧಾರವಾಡ, ಹಾವೇರಿ ಹಾಗೂ ಬೆಳಗಾವಿ ಜಿಲ್ಲೆಗಳ, ಪ್ರಕೃತಿ ವಿಕೋಪ ನಿರ್ವಹಣೆ ವರದಿ, ಶೀಘ್ರ ಸಲ್ಲಿಕೆ.
- ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಫೌಂಡೇಶನ್ನಿಂದ, ವಿಜಯಪುರ ಜಿಲ್ಲೆ, ಕೋಟ್ಯಾಳ ಗ್ರಾಮದ ಸರ್ಕಾರಿ ಶಾಲೆ ನವೀಕರಣ.
- ಕಲ್ಯಾಣ ಕರ್ನಾಟಕದ ಅಭಿವೃದ್ಧಿಗಾಗಿ, ಕಳೆದ 6 ವರ್ಷಗಳಲ್ಲಿ, 24 ಸಾವಿರ ಕೋಟಿ ರೂಪಾಯಿ, ವೆಚ್ಚ.
- 'ಶಾಂತಿಯುತ ವಿಶ್ವಕ್ಕಾಗಿ, ಸಹಕಾರಿ ಸಂಸ್ಥೆಗಳು', ಧ್ಯೇಯದೊಂದಿಗೆ, ಇಂದು ಅಂತಾರಾಷ್ಟ್ರೀಯ ಸಹಕಾರಿ ದಿನಾಚರಣೆ.

<><><>

ಈಗ ವಾರ್ತೆಗಳ ವಿವರ

<><><>

ಧಾರವಾಡ, ಹಾವೇರಿ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ, ಪ್ರಕೃತಿ ವಿಕೋಪ ನಿರ್ವಹಣಾ ಪ್ರಗತಿ ಪರಿಶೀಲನೆ ನಡೆಸಲಾಗಿದ್ದು, ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು ಎಂದು, ಧಾರವಾಡ ಹಾಗೂ ಹಾವೇರಿ ಜಿಲ್ಲೆಗಳ, ಬರ ಮತ್ತು ನೆರೆ ನಿರ್ವಹಣೆ ತಾತ್ಕಾಲಿಕ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ, ತಿಳಿಸಿದ್ದಾರೆ. ಹಾವೇರಿ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ, ಪ್ರಕೃತಿ ವಿಕೋಪ ನಿರ್ವಹಣೆ ಕಾರ್ಯ ಪರಿಶೀಲಿಸಿ, ಮಾತನಾಡಿದರು. ಮುಂಗಾರು ಮಳೆ ಕೊರತೆಯಿಂದ, ರಾಜ್ಯದ ಪ್ರಮುಖ ಜಲಾಶಯಗಳಲ್ಲಿ, ನೀರಿನ ಸಂಗ್ರಹ ಮಟ್ಟ ಕುಸಿದಿದೆ. ಹಿತಮಿತವಾಗಿ ನೀರನ್ನು ಬಳಸ ಬೇಕಿದೆ. ಮುಂಬರುವ ಎರಡು ತಿಂಗಳಿಗೆ ಸಾಕಾಗುವಷ್ಟು, ಡೆಡ್ ಸ್ಟೋರೇಜ್ ಇದೆ ಎಂದರು.

<><><>

ರಾಜ್ಯದ ಬರ ಪರಿಸ್ಥಿತಿ ನಿರ್ವಹಣೆ ಹಾಗೂ ಬೆಳೆಹಾನಿ ಪರಿಹಾರಕ್ಕಾಗಿ, 10 ಸಾವಿರ ಕೋಟಿ ರೂಪಾಯಿ ಮೀಸಲಿಡುವಂತೆ, ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ, ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ. ಬೆಂಗಳೂರಿನಲ್ಲಿ ಮಾತನಾಡಿದ ಅವರು, ವಿಶೇ ’ ಕಾರ್ಯಪಡೆ ರಚನೆ, ಜಾನುವಾರು ರಕ್ಷಣೆಗೆ ಗೋಶಾಲೆ ಸ್ಥಾಪಿಸಬೇಕು ಎಂದರು. ಮಳೆಯ ಅಭಾವದ ಕುರಿತು ಚರ್ಚಿಸಲು, ವಿಧಾನಮಂಡಲ ಅಧಿವೇಶನ ಕರೆಯುವಂತೆ, ಅವರು ಒತ್ತಾಯಿಸಿದರು.

<><><>

ಕೃಷಿ ವಿದ್ಯುತ್ ಸಹಾಯಧನ, 22 ಸಾವಿರ ಕೋಟಿ ರೂಪಾಯಿ, ವರ್ಷವೊಂದಕ್ಕೆ ರಾಜ್ಯ ಸರ್ಕಾರ ನೀಡುತ್ತಿದೆ ಎಂದು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಅವರು, ಇಂಧನ ಇಲಾಖೆ ಅಧಿಕಾರಿಗಳ ಸಭೆ ನಡೆಸಿದರು. Feeder Solarisation, ಇಂಧನ–ದಕ್ಷ ಪಂಪ್‌ಸೆಟ್‌ಗಳ ಬಳಕೆ ಹಾಗೂ ವಿದ್ಯುತ್ ಬೇಡಿಕೆ ನಿರ್ವಹಣೆ ಕಾರ್ಯಕ್ರಮಗಳನ್ನು ವೇಗಗೊಳಿಸಬೇಕು ಎಂದು, ಅಧಿಕಾರಿಗಳಿಗೆ ಅವರು ಸೂಚಿಸಿದರು. 2035 ಕ್ಕೆ, ಗರಿ ್ಠ ವಿದ್ಯುತ್ ಬೇಡಿಕೆ 38 ಗಿಗಾವ್ಯಾಟ್ ತಲುಪುವ ನಿರೀಕ್ಷೆ ಇದೆ. ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ, ಯೋಜನೆ ಹಾಗೂ ಹಣಕಾಸು ನಕ್ಷೆ ರೂಪಿಸುವಂತೆ ಆದೇಶಿಸಿದರು.

<><><>

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಕಳೆದ 6 ವರ್ಷಗಳಲ್ಲಿ, 24 ಸಾವಿರ ಕೋಟಿ ರೂಪಾಯಿ ಅಭಿವೃದ್ಧಿಗಾಗಿ ಬಳಸಿಕೊಂಡಿದೆ ಎಂದು ಮಂಡಳಿ ಕಾರ್ಯದರ್ಶಿ, ನಲಿನ್ ಅತುಲ್ ತಿಳಿಸಿದ್ದಾರೆ. ಕಲಬುರಗಿಯ ನಾಗನಹಳ್ಳಿಯಲ್ಲಿ ಅಭಿಯಂತರರಿಗಾಗಿ, ಎರಡು ದಿನಗಳ ತಾಂತ್ರಿಕ ತರಬೇತಿ ಕಾರ್ಯಾಗಾರಕ್ಕೆ, ಚಾಲನೆ ನೀಡಿ, ಮಾತನಾಡಿದರು. ಕಲ್ಯಾಣ ಕರ್ನಾಟಕ ಭಾಗಕ್ಕೆ ಕೈಗಾರಿಕಾ ನೀತಿ ಅನುಮೋದಿತವಾಗಿದೆ. ಕಳೆದ ಮೂರು ವರ್ಷಗಳಲ್ಲಿ, ಕಲ್ಯಾಣ ಕರ್ನಾಟಕದ, ಮೂಲಸೌಕರ್ಯ ಅಭಿವೃದ್ಧಿಗೆ, 5 ಸಾವಿರ ಕೋಟಿ ರೂಪಾಯಿ ಅನುದಾನ, ಬಿಡುಗಡೆಯಾಗಿದೆ ಎಂದರು.

<><><>

ರಾಜ್ಯದ, ನಗರ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳ ಚುನಾವಣೆಯನ್ನು, ಆಗಸ್ಟ್ ತಿಂಗಳ ಒಳಗೆ ನಡೆಸುವಂತೆ, ಸರ್ವೋಚ್ಚ ನ್ಯಾಯಾಲಯ, ಆದೇಶಿಸಿದೆ; ಸರ್ಕಾರ ಆದೇಶವನ್ನು ಪಾಲಿಸಲಿದೆ ಎಂದು, ನಗರಾಭಿವೃದ್ಧಿ ಖಾತೆ ಸಚಿವ ಡಾಕ್ಟರ್ ಯತೀಂದ್ರ ಸಿದ್ದರಾಮಯ್ಯ, ದಾವಣಗೆರೆಯಲ್ಲಿ ತಿಳಿಸಿದ್ದಾರೆ.

<><><>

ವಿಜಯಪುರ ಜಿಲ್ಲೆ, ತಿಕೋಟಾ ತಾಲೂಕು, ಕೋಟ್ಯಾಳ ಗ್ರಾಮದ ಸರ್ಕಾರಿ ಶಾಲೆಯ ನೂತನ ಕಟ್ಟಡವನ್ನು, ಬೆಂಗಳೂರು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಫೌಂಡೇಶನ್ನಿನ, ಸಾಮಾಜಿಕ ಹೊಣೆಗಾರಿಕೆ ನಿಧಿ ಅಡಿ, 3 ಕೋಟಿ 25 ಲಕ್ಷ ರೂಪಾಯಿ ವೆಚ್ಚದಲ್ಲಿ, ಆಧುನೀಕರಿಸಲಾಗಿದೆ ಎಂದು, ಕೈಗಾರಿಕೆಗಳ ಖಾತೆ ಸಚಿವ ಎಂ.ಬಿ ಪಾಟೀಲ, ತಿಳಿಸಿದ್ದಾರೆ. ನಾವಿನ್ಯತೆ ಹಾಗೂ ಚಟುವಟಿಕೆ ಆಧಾರಿತ ಕಲಿಕೆ ಪ್ರೋತ್ಸಾಹಿಸುವ, 'ಸ್ಟೇಮ್' ಲ್ಯಾಬ್, 'ನಲಿ–ಕಲಿ' ಕೊಠಡಿಗಳನ್ನು ವಿಶೇ ’ವಾಗಿ ರೂಪಿಸಲಾಗಿದೆ ಎಂದು, ಹರ್ಷ ವ್ಯಕ್ತ ಪಡಿಸಿದ್ದಾರೆ.

<><><>

10ನೇ ಮೈಸೂರು ಸಾಹಿತ್ಯ ಸಂಭ್ರಮ, ಇಂದಿನಿಂದ ಎರಡು ದಿನಗಳ ಕಾಲ, ನಡೆಯಲಿದೆ. ಮೈಸೂರು ಲಿಟರರಿ ಫೋರಂ ಚಾರಿಟೇಬಲ್ ಟ್ರಸ್ಟ್ ಹಾಗೂ ಮೈಸೂರು ಬುಕ್ ಕ್ಲಬ್ಸ್ ಚಾರಿಟೇಬಲ್ ಟ್ರಸ್ಟ್, ಮೈಸೂರು ಸಾಹಿತ್ಯ ಸಂಭ್ರಮವನ್ನು ಆಯೋಜಿಸಿದ್ದು, ಇಂದು ಬೆಳಗ್ಗೆ 10 ಗಂಟೆಗೆ, ರಾಜಮಾತೆ ಪ್ರಮೋದಾದೇವಿ ಒಡೆಯರ ಉದ್ಘಾಟಿಸಲಿದ್ದಾರೆ. ಮೈಸೂರು ಸಾಹಿತ್ಯ ಸಂಭ್ರಮದ ನಿರ್ದೇಶಕಿ, ಶುಭಾ ಸಂಜಯ ಅರಸ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ಶುಭಾ ಸಂಜಯ ಅರಸ್ ಧ್ವನಿ – 34 ಸೆಕೆಂದುಗಳು

<><><>

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(37 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

'ಶಾಂತಿಯುತ ವಿಶ್ವಕ್ಕಾಗಿ, ಸಹಕಾರಿ ಸಂಸ್ಥೆಗಳು' ಎಂಬ ಧ್ಯೇಯದೊಂದಿಗೆ, ಇಂದು ಅಂತಾರಾಷ್ಟ್ರೀಯ ಸಹಕಾರಿ ದಿನಾಚರಣೆ. ಸುಸ್ಥಿರ ಅಭಿವೃದ್ಧಿಗೆ, ಸಹಕಾರಿ ಕ್ಷೇತ್ರದ ಕೊಡುಗೆ ಸ್ಮರಿಸುವ ಹಾಗೂ ಸಹಕಾರಿ ಚಳವಳಿ ಬಲಪಡಿಸಲು, ವಿಶ್ವ ಸಂಸ್ಥೆ ಈ ದಿನಾಚರಣೆ ಘೋಷಿಸಿದೆ. ಸಹಕಾರ ಸಂಘಗಳ, ನಿವೃತ್ತ ಅಪರ ನಿಬಂಧಕಿ, ಡಾಕ್ಟರ್ ಹನುಮಾಕ್ಷಿ ಗೋಗಿ, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ಹನುಮಾಕ್ಷಿ ಗೋಗಿ ಧ್ವನಿ – 45 ಸೆಕೆಂದುಗಳು

<><><>

ಚಿತ್ರದುರ್ಗ ಜಿಲ್ಲೆಯಾದ್ಯಂತ, ಸರಾಸರಿ 25 ಹೊಸ ಎಚ್.ಐ.ವಿ. ಸೋಂಕಿತರು ಪ್ರತಿ ತಿಂಗಳು ಪತ್ತೆಯಾಗುತ್ತಿದ್ದಾರೆ; ವಿಶೇಷ ಜನ ಜಾಗೃತಿ ಜಾಥಾ ಹಾಗೂ ಅರಿವು ಕಾರ್ಯಕ್ರಮ ಆಯೋಜಿಸಲಾಗುತ್ತಿದೆ ಎಂದು, ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ, ಡಾಕ್ಟರ್ ಸಿ.ಓ. ಸುಧಾ, ತಿಳಿಸಿದ್ದಾರೆ. ಕ್ಷಯ ರೋಗ ನಿಯಂತ್ರಣ ಕೇಂದ್ರದಲ್ಲಿ, ಎಚ್.ಐ.ವಿ. ಹಾಗೂ ಏಡ್ಸ್ ನಿಯಂತ್ರಣ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ, ಅವರು ಈ ಮಾಹಿತಿ ನೀಡಿದರು. ಕೆ–ಸ್ಯಾಪ್ಸ್ ಉಪ ನಿರ್ದೇಶಕಿ, ಡಾಕ್ಟರ್ ಗೀತಾ ಮಕ್ಕಣ್ಣವರ ಸಭೆಯ ಅಧ್ಯಕ್ಷತೆ ವಹಿಸಿ, ಮಾತನಾಡಿ 2030ರ ವೇಳೆಗೆ ಎಚ್.ಐ.ವಿ ಮುಕ್ತ ಸಮಾಜ ನಿರ್ಮಾಣಕ್ಕೆ, ಜನ ಸಹಕಾರ ಅಗತ್ಯ ಎಂದರು.

<><><>

ಇಂದು ಸ್ವಾಮಿ ವಿವೇಕಾನಂದರ ಪುಣ್ಯತಿಥಿ. ಜುಲೈ 4, 1902 ರಂದು ಪಶ್ಚಿಮ ಬಂಗಾಳದ ಬೇಲೂರು ಮಠದಲ್ಲಿ ಅವರು, ತಮ್ಮ 39 ನೇ ವಯಸ್ಸಿನಲ್ಲಿ ನಿಧನರಾದರು. 1893 ರಲ್ಲಿ ಚಿಕಾಗೋದಲ್ಲಿ ನಡೆದ ಧರ್ಮ ಸಂಸತ್ತಿನಲ್ಲಿ ಅವರು ಮಾಡಿದ ಐತಿಹಾಸಿಕ ಭಾ ‘ಣ, ಅಧ್ಯಾತ್ಮ, ಯುವಜನ ಸಬಲೀಕರಣ ಹಾಗೂ ರಾಷ್ಟ್ರೀಯ ಮೌಲ್ಯಗಳ ಮೂಲಕ, ಅವರ ವ್ಯಕ್ತಿತ್ವವನ್ನು ಸ್ಮರಣೀಯವಾಗಿಸಿವೆ.

<><><>

ಭಾರತದ ಹೆಮ್ಮೆಯ, ತ್ರಿವರ್ಣ ಧ್ವಜ ವಿನ್ಯಾಸಕ ಹಾಗೂ ಸ್ವಾತಂತ್ರ್ಯ ಸೇನಾನಿ, ಪಿಂಗಳಿ ವೆಂಕಯ್ಯ ಅವರ ಪುಣ್ಯತಿಥಿ ಇಂದು. 1963 ರ, ಜುಲೈ ನಾಲ್ಕರಂದು ಅವರು ನಿಧನರಾದರು. ಅವರ ಕೊಡುಗೆಗಳನ್ನು ಸ್ಮರಿಸಿ, ಶ್ರದ್ಧಾಸುಮನ ಅರ್ಪಿಸಲಾಗುತ್ತಿದೆ.

<><><>

ಧಾರವಾಡ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ, ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜಗಾರ ಆಜೀವಿಕಾ ಮಿಷನ್ ಗ್ರಾಮೀಣ ಯೋಜನೆಯ, ತರಬೇತಿ ಕಾರ್ಯಗಾರಕ್ಕೆ, ಜಿಲ್ಲಾ ಪಂಚಾಯಿತಿ ಸಿ.ಇ.ಓ. ಭುವನೇಶ ಪಾಟೀಲ ಚಾಲನೆ ನೀಡಿದರು.

<><><>

ಮತದಾರರ ಪಟ್ಟಿಯ, ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ, ಕಳೆದ 2002ರ ವರೆಗೆ, ಏಳು ಬಾರಿ ನಡೆದಿದೆ. ಐದು ವರ್ಷಗಳಿಗೊಮ್ಮೆ ನಡೆಯಬೇಕಾದ ಎಸ್.ಐ.ಆರ್. ಪ್ರಕ್ರಿಯೆ ಈಗ, ದೇಶಾದ್ಯಂತ ಆಯೋಜನೆಯಾಗಿದೆ ಎಂದು, ಗದಗ–ಹಾವೇರಿ ಲೋಕಸಭಾ ಕ್ಷೇತ್ರದ ಸಂಸದ, ಬಸವರಾಜ ಬೊಮ್ಮಾಯಿ, ಎಕ್ಸ್ ಮಾಧ್ಯಮದಲ್ಲಿ ತಿಳಿಸಿದ್ದಾರೆ. ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ, ಕಾನೂನುಬದ್ಧ ಹಾಗೂ ಸಂವಿಧಾನಬದ್ಧ ಪ್ರಕ್ರಿಯೆಯಾಗಿದ್ದು, ಜನ ಸಹಕರಿಸುವಂತೆ ಕೋರಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

ಹಾವೇರಿ ಜಿಲ್ಲೆಯ ಎಂಟು ತಾಲೂಕುಗಳಲ್ಲಿ, 7ನೇ ತಾರೀಖಿನಿಂದ, ಆರು ಶಾಸಕರು ಜೊತೆಗೂಡಿ, ವಯಕ್ತಿಕ ಖರ್ಚಿನಲ್ಲಿ ಮೋಡ ಬಿತ್ತನೆ ಕೈಗೊಳ್ಳಲಿದ್ದಾರೆ ಎಂದು, ರಾಣಿಬೆನ್ನೂರು ಶಾಸಕ ಪ್ರಕಾಶ ಕೋಳಿವಾಡ ತಿಳಿಸಿದ್ದಾರೆ.

ಮತದಾರರ ಪಟ್ಟಿಯ, ವಿಶೇ ‘ ಸಮಗ್ರ ಪರಿ ‘ರಣೆ ಕುರಿತು, ಜನ ಜಾಗೃತಿ ಸೈಕಲ್ ಜಾಥಾಕ್ಕೆ, ಬಾಗಲಕೋಟೆಯಲ್ಲಿ ರಾಜ್ಯ ಸ್ವೀಪ್ ನೋಡಲ್ ಅಧಿಕಾರಿ ಪಿ.ಎಸ್. ವಸ್ತ್ರದ, ಚಾಲನೆ ನೀಡಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

ಧಾರವಾಡ, ಹಾವೇರಿ ಹಾಗೂ ಬೆಳಗಾವಿ ಜಿಲ್ಲೆಗಳ, ಪ್ರಕೃತಿ ವಿಕೋಪ ನಿರ್ವಹಣೆ ವರದಿ, ಶೀಘ್ರ ಸಲ್ಲಿಕೆ.

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಫೌಂಡೇಶನ್ನಿಂದ, ವಿಜಯಪುರ ಜಿಲ್ಲೆ, ಕೋಟ್ಯಾಳ ಗ್ರಾಮದ ಸರ್ಕಾರಿ ಶಾಲೆ ನವೀಕರಣ.

ಕಲ್ಯಾಣ ಕರ್ನಾಟಕದ ಅಭಿವೃದ್ಧಿಗಾಗಿ, ಕಳೆದ 6 ವರ್ಷಗಳಲ್ಲಿ, 24 ಸಾವಿರ ಕೋಟಿ ರೂಪಾಯಿ, ವೆಚ್ಚ.

‘ಶಾಂತಿಯುತ ವಿಶ್ವಕ್ಕಾಗಿ, ಸಹಕಾರಿ ಸಂಸ್ಥೆಗಳು’, ಧ್ಯೇಯದೊಂದಿಗೆ, ಇಂದು ಅಂತಾರಾಷ್ಟ್ರೀಯ ಸಹಕಾರಿ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>